# ಮಹಿಳೆಯಾಗಿ ನನ್ನದು ಭಾಷೆಯನ್ನು ಫೆಮಿನೈಸ್ ಮಾಡುವ ಪ್ರಯತ್ನ

## ರೋಜ್ಞಾ ಜಮಾಲಿ
## ಕಿರು ಸಂದರ್ಶನ

◆ **ನಿಮ್ಮ ಕವಿತೆಯ ನಿರೂಪಣಾ ಕ್ರಮದಲ್ಲಿ ನಾಟಕೀಯ ಎನಿಸುವ ಅಂಶಗಳಿಗೆ ಹೆಚ್ಚು ಒತ್ತು ಬಿದ್ದಿದೆ. ಇದು ಯಾಕೆ ಮುಖ್ಯ ಅನಿಸಿತು? ಉದಾಹರಣೆಗೆ, This dead body is not An apple; it's either a cucumber or A pear ಅಥವಾ Making Coffee To Run A Crime Story ಅಥವಾ The forbidden city ಯಂತಹ ಕವಿತೆಗಳು ತಕ್ಷಣ ನೆನಪಾಗುತ್ತವೆ...**

ನಿಮ್ಮ ಗ್ರಹಿಕೆ ಸರಿಯಾದ ದಿಕ್ಕಿನಲ್ಲಿದೆ, ನನ್ನ ಬಹಳಷ್ಟು ಕವಿತೆಗಳನ್ನು ನಾಟಕೀಯ ಶೈಲಿಯಲ್ಲಿ ಕಟ್ಟಿದ್ದೇನೆ. ಮೈಕೇಲ್ ಭಕ್ತಿನ್‌ನ ಪಾಲಿಫೋನಿಕ್ (ಬಹುಸ್ವರ) ರಚನಾ ಸಿದ್ಧಾಂತದ ಪ್ರಕಾರ ನೀವು ಕೇಳುವ ವಿಭಿನ್ನ ಬಗೆಯ ಧ್ವನಿಗಳು ಒಂದು ಸಮಾಜವನ್ನು ಪ್ರತಿನಿಧಿಸುತ್ತವೆ. ಪರ್ಷಿಯನ್ ಭಾಷೆಗೆ ಇದು ತೀರಾ ಹೊಸದು, ಮತ್ತದನ್ನು ಪ್ರಯತ್ನಿಸುವುದು ಒಳ್ಳೆಯದು ಅಂತ ನಾನಂದುಕೊಂಡೆ. 'ದ ಫಾರ್‌ಬಿಡನ್ ಸಿಟಿ' ಇದೇ ಲಹರಿಯಲ್ಲಿ ಬರೆದ ಇನ್ನೊಂದು ಪದ್ಯ. ಇದು ರಾಜಧಾನಿ ತೆಹರಾನಿನ ಬೇರೆ ಬೇರೆ ಬೀದಿಗಳ ಶಬ್ದ ಗದ್ದಲಗಳನ್ನು, ನುಡಿ ಗೊಂದಲಗಳನ್ನು ಮತ್ತು ನಿರಂತರವಾಗಿ ಬದಲಾಗುವ ಧ್ವನಿಗಳನ್ನು ಒಳಗೊಂಡಿದೆ. ಪದ್ಯದ ಅಧಿಕೃತ ಭಾಷೆಯನ್ನು ಮುರಿದು ಮತ್ತದಕ್ಕೆ ಹೆಚ್ಚಿನ ಪದಗಳನ್ನು ಸೇರಿಸುವುದರ ಮೂಲಕ ಮಹಾನಗರಗಳ ಬಹುತೇಕ ಸಾಂದ್ರೀಕೃತ, ಕಿಕ್ಕಿರಿದ ಪ್ರದೇಶಗಳ ದಿನ ನಿತ್ಯದ ಬದುಕಿನ ಪರ್ಷಿಯನ್ ಆಡುನುಡಿಗಳನ್ನು ಕಾವ್ಯದ ಮೂಲಕ ಹಿಡಿದಿಡುವುದು ತಕ್ಕಮಟ್ಟಿಗೆ ನನಗೆ ಸಾಧ್ಯವಾಗಿದೆ.

◆ **ಅತ್ಯಂತ ಶ್ರೀಮಂತವಾದ ಪರ್ಷಿಯನ್ ಭಾಷೆಯ ಕಲೆ, ಸಾಹಿತ್ಯ, ಸಂಗೀತ ಪರಂಪರೆ ನಿಮ್ಮ ಬೆನ್ನಿಗಿದೆ. ಮತ್ತೆ ಆಧುನಿಕ ಇಂಗ್ಲಿಷ್ ಸಾಹಿತ್ಯದಲ್ಲಿ ಪದವಿ ಪಡೆದು ಅನೇಕ ಮೇಜರ್ ಕವಿಗಳನ್ನು ಪರ್ಷಿಯನ್ ಭಾಷೆಗೂ ಅನುವಾದಿಸಿದ್ದೀರಿ. ಈ ಎರಡೂ ಪರಂಪರೆಗಳಿಂದ ಏನು ಕಲಿತಿರಿ? ಇವೆಲ್ಲಾ ನಿಮ್ಮ ಬರವಣಿಗೆಗೆ ಹೇಗೆ ಸಹಕರಿಸಿದವು?**

ಪರ್ಷಿಯನ್ ಸಾಹಿತ್ಯದ ಓರಿಯೆಂಟಲ್ ಪರಿಕಲ್ಪನೆಯನ್ನ ತೊಡೆದುಹಾಕಲು ಮತ್ತು ಅದು ತನ್ನೊಂದಿಗೆ ತರುವ ನೀರಸತೆಯನ್ನು ಪುನರಾವರ್ತಿಸದಿರುವುದು ನನಗೆ ಸಾಧ್ಯವಾಯಿತು. ಕ್ಲೀಷೆ ತುಂಬಿದ ನುಡಿಗಟ್ಟುಗಳು ಮತ್ತು ಭಾಷೆ, ಜೀವಂತಿಕೆ ಇಲ್ಲದ ರೂಪಕಗಳು ಮತ್ತು ಪುನರಾವರ್ತಿತ ಸಾಹಿತ್ಯಿಕ ವಿಧಾನಗಳು ಸಮಕಾಲೀನತೆಯನ್ನು ಧ್ವನಿಸುವುದಿಲ್ಲ ಮತ್ತು ನಮ್ಮ ದಿನ ನಿತ್ಯದ